ಒ ಎಸ್ ನಂ. **12/2012** ಡಿ ಡಬ್ಲೂ-**4**

**ದಿನಾಂಕಃ 16.03.2021.ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ-ಶ್ರೀ ಆರ್ ಎಲ್ ವಾದಿ ಪರ ವಕೀಲರಿಂದಃ**

ನೀವು ಮತ್ತು ಜವರೇಗೌಡ ಹಾಗೂ ಅವರ ಮಕ್ಕಳು ಒಂದೇ ಊರಿನಲ್ಲಿ ವಾಸ ಇದ್ದೀರಿ ಎಂದರೆ ಸಾಕ್ಷಿ ನಾನು ಕೆ. ಕಾಳೇನಹಳ್ಳಿಯಲ್ಲಿ ಇದ್ದೇನೆ. ಜವರೇಗೌಡರು ಜನಿವಾರ ಗ್ರಾಮದಲ್ಲಿ ಇದ್ದಾರೆ ಎನ್ನುತ್ತಾರೆ. ದಾವಾ ಸ್ವತ್ತು ಕೆ. ಕಾಳೇನಹಳ್ಳಿ ಗ್ರಾಮಕ್ಕೆ ಸೇರಿದ ಸ್ವತ್ತಾಗಿರುವ ವಿಚಾರ ಗೊತ್ತಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಾವಾ ಸರ್ವೆ ನಂಬರ್ಃ 106 ಆಗಿದ್ದು ಹಳೆ ಸರ್ವೆ ನಂಬರ್ಃ 60 ಎಂದು ಇದೆ ಎನ್ನುತ್ತಾರೆ. ಸರ್ವೆ ನಂಬರ್ಃ 60 ಗೋಮಾಳದ ಜಮೀನು ಆಗಿತ್ತು. ಸದರಿ ಸರ್ವೆ ನಂಬರ್ಃ 60 ರಲ್ಲಿ ಸುಮಾರು 200 ಎಕರೆ ಜಮಿನು ಇದೆ. ಆ ಸರ್ವೆ ನಂಬರ್ ನಲ್ಲಿ ಹಲವಾರು ಪೋಡುಗಳು ಆಗಿವೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 1974-75 ರಲ್ಲೇ ಪೋಡುಗಳು ಆಗಿದೆ. ಆ ಪೋಡು ಆಗಿರುವ ಸಂಬಂಧ ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ನಾವು ಹೇಗೆ ದಾಖಲೆ ಕೊಡುವುದು ಅವರ ಜಮೀನಿಗೆ ಅವರು ಕೊಡಬೇಕು ಎನ್ನುತ್ತಾರೆ.

ಸರ್ವೆ ನಂಬರ್ಃ 106 ರ ಸಂಬಂಧ ಸಾಕ್ಷ್ಯ ಹೇಳಲು ಬಂದಿದ್ದೇನೆ. ಸದರಿ ಸ್ವತ್ತು ಜವರೇಗೌಡರ ಹೆಸರನಲ್ಲಿ ಇದೆ. 5 ಎಕರೆ ಚಿಲ್ಲರೇ ಜಮೀನು ಅವರ ಹೆಸರನಲ್ಲಿ ಇದೆ. ಆ ಜಮೀನಿನ ಆರ್ ಟಿ ಸಿ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಸರ್ಕಾರ ಕೊಡಬೇಕು ನಾವು ಕೊಡಲಾಗುತ್ತದಾ ಎನ್ನುತ್ತಾರೆ. ಸರ್ವೆ ನಂಬರ್ಃ 106 ರಲ್ಲಿ ಜವರೇಗೌಡರು ಸ್ವಾದೀನದಲ್ಲಿ ಇಲ್ಲಾ ಈಗಲೂ ಕೂಡ ವಾದಿಯೇ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

ಜವರೇಗೌಡರಿಗೆ 1974-75 ರಲ್ಲಿ ಆ ಸ್ವತ್ತು ಮಂಜೂರಾಗಿದೆ. ಸರ್ವೆ ನಂಬರ್ಃ 60 ರ ಗೋಮಾಳ ಜಮೀನಿನಲ್ಲಿ ನಿಮ್ಮದು ಜಮೀನು ಇದೆಯಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನನ್ನ ಜಮೀನಿನ ಸರ್ವೆ ನಂಬರ್ಃ 104. ಆ ಸ್ವತ್ತು ರಾಮಯ್ಯನವರಿಗೆ 1974-75 ರಲ್ಲಿ ಮಂಜೂರಾಗಿದ್ದು ನಾನು ಆ ಸ್ವತ್ತನ್ನ ಕೊಂಡುಕೊಂಡಿದ್ದೇನೆ ಎನ್ನುತ್ತಾರೆ. ರಾಮಯ್ಯನವರಿಗೆ ಮಂಜೂರಾದ ಸಮಯದಲ್ಲೇ 1 ನೇ ಪ್ರತಿವಾದಿ ಕೆಂಪಮ್ಮನವರಿಗೆ 4 ಎಕರೆ ಜಮೀನು ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಹಾಗೆ ಕೆಂಪಮ್ಮನಿಗೆ ಮಂಜೂರಾದ ಜಮೀನನ್ನ 1987 ರಲ್ಲಿ ವಾದಿ ಯಶೋದಮ್ಮ ಕೊಂಡುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗೆ ಕೊಂಡುಕೊಂಡ ನಂತರ ವಾದಿ ಪಿ ಎಲ್ ಡಿ ಬ್ಯಾಂಕ್ ನಲ್ಲಿ ಸಾಲ ಪಡೆದುಕೊಂಡು ಜಮೀನಿನಲ್ಲಿ 100 ಚಿಲ್ಲರೆ ತೆಂಗಿನ ಗಿಡ ನೆಟ್ಟು ಬೆಳೆಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಯಶೋದಮ್ಮನವರು ಯಾವ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಯಶೋದಮ್ಮನ ಜಮೀನಿಗೂ ಜವರೇಗೌಡರ ಜಮೀನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಆ ಜಮೀನು ಒಟ್ಟಿಗೆ ಇದೆ ಎನ್ನುತ್ತಾರೆ. ಒಟ್ಟು ಎಷ್ಟು ಎಕರೆ ಇರಬಹುದು ಎಂದರೆಸಾಕ್ಷಿ 5 ಎಕರೆ ಚಿಲ್ಲರೆ ಇರಬಹುದು ಎನ್ನುತ್ತಾರೆ. ಆ ಜಮೀನಿನಲ್ಲಿ 4 ಎಕರೆ ಜಮೀನು ವಾದಿ ಯಶೋದಮ್ಮನಿಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿ ಅದೆಲ್ಲಾ ನನಗೆ ಗೊತ್ತಿಲ್ಲ ಒಟ್ಟಿನಲ್ಲಿ ಜವರೇಗೌಡರು ಜಮೀನನ್ನ ವ್ಯವಸಾಯ ಮಾಡುತ್ತಾರೆ ಎನ್ನುತ್ತಾರೆ. ಆ ಸ್ವತ್ತಿನ ಪೊಟೋ ನೋಡಿದರೆ ನೀವು ಗುರುತಿಸುತ್ತೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಈಗ ನೋಡುತ್ತಿರುವ ಪೊಟೋದಲ್ಲಿ ಇರುವ ತೆಂಗಿನ ಗಿಡಗಳು ದಾವಾ ಸರ್ವೆ ನಂಬರ್ಃ 106 ಕ್ಕೆ

ಸಂಬಂಧಪಟ್ಟಿದ್ದ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಪೊಟೋವನ್ನ ನಿಪಿ-10 ಎಂದು ಗುರುತಿಸಲಾಯಿತು. ಆ ಜಮೀನಿಗೆ ಸಂಬಂಧಪಟ್ಟಂತೆ ಅದರ ಮಾಲೀಕರಾದ ವಾದಿ ಕುಳಿತುಕೊಂಡು ಜೆ ಸಿ ಬಿಯಲ್ಲಿ ಕೆಲಸ ಮಾಡಿಸುತ್ತಿರುವ ಪೊಟೋ ಆಗಿದೆ ಎಂರದೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಪೊಟೋ ವಾದಿ ಮತ್ತು ಅವರ ಮಗ ದಾವಾ ಸ್ವತ್ತನ್ನ 2019-20 ನೇ ಸಾಲಿನಲ್ಲಿ ಮಟ್ಟ ಮಾಡಿಸುತ್ತಿರುವ ಪೋಟೋ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈಗಲೂ ಕೂಡ ವಾದಿ ಹಾಗೂ ಅವರ ಕುಟುಂಬ ದಾವಾ ಸ್ವತ್ತಿನಲ್ಲಿ ಅನುಭವ ಮಾಡಿಕೊಂಡು ಇದ್ದಾರೆ, ನೀವು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ.

ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಾಕ್ಷ್ಯಕ್ಕೂ ಮತ್ತು ನ್ಯಾಯಾಲಯದಲ್ಲಿ ಹೇಳುತ್ತಿರುವ ಸಾಕ್ಷ್ಯಕ್ಕೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಚಾರ ನಿಮಗೆ ಗೊತ್ತಾ ಎಂದರೆ ಸಾಕ್ಷಿ ನಾವೇ ಬರೆದುಕೊಟ್ಟಿರುವುದು ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸ್ವತ್ತಿನ ಚೆಕ್ಕು ಬಂದಿ ನಿಮಗೆ ಹೇಳಲಾಗುತ್ತದಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣೆಗಲ್ಲಿ ಹೇಳಿರುವ ಚೆಕ್ಕು ಬಂದಿಗೂ ದಾವಾ ಸ್ವತ್ತಿನ ಚೆಕ್ಕು ಬಂದಿಗೂ ಒಂದಕ್ಕೊಂದು ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ಃ 106 ರ ಪಶ್ಚಿಮಕ್ಕೆ ನನ್ನ ಜಮೀನು ಇದೆ. ಪೂರ್ವಕ್ಕೆ ಸಿದ್ದಪ್ಪ ಮತ್ತು ನಾಗರಾಜುವಿನ ಜಮೀನು ಇದೆ ಎನ್ನುತ್ತಾರೆ. ನೀವು ಹೇಳುವ ಚೆಕ್ಕು ಬಂದಿ ದಾವಾ ಸ್ವತ್ತಿನ ಚೆಕ್ಕು ಬಂದಿ ಅಲ್ಲಾ ಎಂದರೆ ಸರಿಯಲ್ಲ. ನೀವು ದಾವಾ ಸ್ವತ್ತಿನ ಚೆಕ್ಕು ಬಂದಿಯಲ್ಲಿ ಇಲ್ಲಾ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಜವರೇಗೌಡರು ಮತ್ತು ಅವರ

ಮಕ್ಕಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಸಂಬಂಧ ಜವರೇಗೌಡರ ಮಕ್ಕಳಿಗೂ ಮತ್ತು ವಾದಿಯ ಗಂಡ ಕೃಷ್ಣನ ನಡುವೆ ಜಗಳ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಸಂಬಂಧ ಕ್ರಿಮಿನಲ್ ಪ್ರಕರಣ ಒಂದು ದಾಖಲಾಗಿತ್ತು ಎಂದರೆ ಸಾಕ್ಷಿ ಅವರ ಜಗಳ ಕಾಯ್ದುಕೊಂಡು ನಾವು ಇರಲಾಗುತ್ತದಾ ಎನ್ನುತ್ತಾರೆ. ಹಾಗಾಗಿ ನಿಮಗೆ ಕ್ರಿಮಿನಲ್ ಮೊಕದ್ದಮೆಯ ವಿಚಾರ ಗೊತ್ತಿಲ್ಲ ಎಂದರೆ ಸಾಕ್ಷಿ ಗಲಾಟೆ ಆದ ವಿಚಾರ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿಗೂ ಜವರೇಗೌಡರ ಸ್ವತ್ತಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಜವರೇಗೌಡರ ಮಕ್ಕಳ ಮಾತನ್ನ ಕೇಳಿ ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸಾಕ್ಷಿ ನಾವು ಸರಿಯಾಗಿ ಹೇಳುತ್ತೇವೆ ನೀವು ಸುಳ್ಳು ಹೇಳುತ್ತಿದ್ದೀರಿ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ**

ನನ್ನಃ ಉಃಲೇಃಕ್ಕೆಃ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ, ಚನ್ನರಾಯಪಟ್ಟಣ

OS 12/2012
DW-4